# ನಂಟು

ನೀರುದೋಸೆ ಕಾದ ಹಂಚಿನ
ಮೇಲೆ ಹೊಯ್ದರಷ್ಟೆ
ಸಾಲದು ಮುಚ್ಚಿ
ಉಸಿರುಗಟ್ಟಿಸಿದರೆ ತುಂಬಾ
ರುಚಿ...

ಆಹಾ!! ಕೆಂಡದರೊಟ್ಟಿ
ಸುಟ್ಟರೂ ಮೃದು
ಬಿಸಿ ಹಬೆಯಲೂ
ಉಬ್ಬುಬ್ಬಿ ಸೊಗಸಾದ
ಇಡ್ಲಿ
ತಾನೇ ಅರಳುವ
ಒಗ್ಗರಣೆಯಲಿ ಹುರಿದ
ಉಪ್ಪಿಟ್ಟು, ಕರಿದ ಬೂಂದಿ
ಜಾಮೂನು...
ಬಾಣಲೆಯಿಂದ ಬಿಸಿಪಾಕದಲಿ

ಬಾಣಲೆಯಿಂದ ಬೆಂಕಿಗೆ
ಬಂಕಿಯಿಂದ ಬಾಣಲೆಗೆ
ಓಹೋ... ಎಂಥಾ
ಬಾಂಧವ್ಯ

ಸುಟ್ಟರೆ, ಮುಚ್ಚಿದರೆ
ಹುರಿದರೆ ಭಾವನೆಗಳ
ಹದವಾದ ಸುಂದರ
ಕವನ

● **ಕಲಾ ಭಟ್**



ಚಿತ್ರಗಳು: ವಾಗೀಶ ಹೆಗಡೆ